# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 09.05.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಹಲವು ಕಡೆಗಳಲ್ಲಿ ರಾತ್ರಿ ಹೊತ್ತಿನಲ್ಲಿ ಘನತ್ಯಾಜ್ಯ ವಸ್ತುಗಳು, ಮಣ್ಣು, ಕಟ್ಟಡಗಳ ಭಗ್ನಾವಶೇಷಗಳು ಮತ್ತಿತರೆ ವಸ್ತುಗಳನ್ನು ವಾಹನಗಳ ಮುಖಾಂತರ ಮಳೆ ನೀರು ಚರಂಡಿ ಮತ್ತು ರಸ್ತೆಬದಿಯಲ್ಲಿ ತಂದು ಹಾಕುತ್ತಿರುವುದು ಕಂಡುಬಂದಿದೆ. ಈ ಬಗ್ಗೆ ಪೋಲಿಸ್ ಇಲಾಖೆಯ ಸಹಕಾರವನ್ನು ಪಡೆದು ಅಂತಹ ತ್ಯಾಜ್ಯ ವಸ್ತುಗಳನ್ನು ತಂದು ಹಾಕುವ ವಾಹನಗಳನ್ನು ಗುರುತಿಸಿ ಜಪ್ತಿಮಾಡಿ, ವಾಹನದ ಬಗ್ಗೆ ಆರ್.ಟಿ.ಓ.ಗೆ ವರದಿ ನೀಡಿ ಕ್ರಮ ಕೈಗೊಳ್ಳಲು ಪಾಲಿಕೆಯ ಆಯುಕ್ತರು ಎಲ್ಲಾ ವಲಯ ಅಪರ/ಜಂಟಿ ಆಯುಕ್ತರುಗಳಿಗೆ ಸೂಚಿಸಿದ್ದಾರೆ. ಟ್ರಾಕ್ಟರ್‌ಗೆ ರೂ.10,000.00 ಹಾಗೂ ಲಾರಿಗೆ ರೂ.25,000.00 ಗಳ ವರೆಗೂ ದಂಡ ವಿಧಿಸಲು ಕ್ರಮ ಕೈಗೊಳ್ಳುವುದು. ಘನ ತ್ಯಾಜ್ಯ ವಸ್ತುಗಳನ್ನು ತಂದು ಹಾಕುತ್ತಿರುವವರ ಬಗ್ಗೆ ಮಾಹಿತಿಯನ್ನು ನೀಡಿದವರಿಗೆ ರೂ.5,000.00 ಗಳನ್ನು ಪ್ರೋತ್ಸಾಹ ಧನವನ್ನು ನೀಡಲು ಪರಿಗಣಿಸುವುದು. ಘನತ್ಯಾಜ್ಯ ವಸ್ತುವನ್ನು ತಂದು ಹಾಕುತ್ತಿರುವವರ ವಿರುದ್ಧ ದಂಡ ವಿಧಿಸುವ ಕ್ರಮವನ್ನು ಆಯಾ ವಲಯದ ಮುಖ್ಯ ಅಭಿಯಂತರರುಗಳು ಕೈಗೊಳ್ಳುವುದು ಹಾಗೂ ಮಾಹಿತಿ ನೀಡುವವರಿಗೆ ಸೂಕ್ತ ಪ್ರೋತ್ಸಾಹ ಧನ ವಿತರಣೆ ಬಗ್ಗೆ ಆಯಾ ವಲಯದ ಅಪರ / ಜಂಟಿ ಆಯುಕ್ತರು ಕ್ರಮ ಕೈಗೊಳ್ಳುವಂತೆ ತಿಳಿಸಿದ್ದಾರೆ.

ಪಾದಚಾರಿ ರಸ್ತೆಗಳ ಮೇಲೆ ಕಟ್ಟಡ ನಿರ್ಮಾಣಕ್ಕೆ ಬಳಸುವ ಸಾಮಗ್ರಿಗಳನ್ನು ಶೇಖರಿಸಿ ಪಾದಚಾರಿಗಳಿಗೆ ಓಡಾಡಲು ಬಹಳ ತೊಡಕುಂಟಾಗುತ್ತಿದೆ. ಈ ಬಗ್ಗೆಯೂ ಸಹ ಗಮನ ಹರಿಸಿ ಕಟ್ಟಡದ ಮಾಲೀಕರಿಗೆ ಸೂಕ್ತ ಸೂಚನೆ ನೀಡಿ ಕಟ್ಟಡಕ್ಕೆ ಬಳಸುವ ಸಾಮಾಗ್ರಿಗಳನ್ನು ಪಾದಚಾರಿ ರಸ್ತೆಗಳ ಮೇಲೆ ಶೇಖರಿಸದಿರಲು ತಿಳಿಸುವುದು. ಆದಾಗ್ಯೂ ಕಟ್ಟಡಕ್ಕೆ ಬಳಸುವ ಸಾಮಗ್ರಿಗಳನ್ನು ಪಾದಚಾರಿ ರಸ್ತೆಗಳ ಮೇಲೆ ಶೇಖರಿಸುವುದನ್ನು ಮುಂದುವರೆಸಿದಲ್ಲಿ ಅಂತಹ ಕಟ್ಟಡ ಮಾಲೀಕರಿಗೆ ಸೂಕ್ತ ದಂಡ ವಿಧಿಸಿ ಸಾಮಗ್ರಿಗಳನ್ನು ಪಾದಚಾರಿ ರಸ್ತೆಗಳಿಂದ ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ವಲಯ ಅಪರ/ಜಂಟಿ ಆಯುಕ್ತರು ಹಾಗೂ ಮುಖ್ಯ ಅಭಿಯಂತರರಿಗೆ ಪಾಲಿಕೆಯ ಆಯುಕ್ತರು ಸೂಚನೆ ನೀಡಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**